# ಮೂರು ಮುತ್ತುಗಳು

■ ವೇದಾವತಿ ಹೆಚ್. ಎಸ್.
ಚಿತ್ರ: ಸಂತೋಷ್ ಸಸಿಹಿತ್ಲು

ಬಹಳ ವರ್ಷಗಳ ಹಿಂದೆ ಇಂದ್ರಪುರಿ ರಾಜ್ಯವನ್ನು ಮಾರ್ತಾಂಡನೆಂಬ ರಾಜನು ಆಳುತ್ತಿದ್ದನು. ರಾಜನು ತುಂಬಾ ಬುದ್ಧಿವಂತನಾಗಿದ್ದನು. ಒಮ್ಮೆ ರಾಜನ ಅಸ್ಥಾನಕ್ಕೆ ಪಂಡಿತರೊಬ್ಬರು ಬಂದು ರಾಜನಿಗೆ ಶ್ರೇಯಸ್ಸನ್ನು ಕೋರಿದರು. ಆಗ ರಾಜನು ಸಂತೋಷಗೊಂಡು ಅವರಲ್ಲಿ 'ತನ್ನಿಂದ ಏನಾದರೂ ಸಹಾಯ ಆಗಬೇಕಿದ್ದರೆ ತಿಳಿಸಿ' ಎಂದು ಕೇಳಿಕೊಂಡನು.

ರಾಜನಲ್ಲಿ ಪಂಡಿತರು 'ದೊರೆಯೇ, ನನ್ನ ಮಗಳಿಗೆ ಮದುವೆಯನ್ನು ಮಾಡಬೇಕೆಂದುಕೊಂಡಿದ್ದೇನೆ. ನನ್ನಲ್ಲಿ ಯಾವ ಐಶ್ವರ್ಯವೂ ಇಲ್ಲ. ಯಾವುದೇ ಐಶ್ವರ್ಯ ಇರದಿದ್ದರೂ ಅದಕ್ಕಿಂತಲೂ ಬಹು ಅಮೂಲ್ಯವಾದ ಮೂರು ನುಡಿಮುತ್ತುಗಳಿವೆ. ನಾನಿಂದು ಅವುಗಳನ್ನು ನಿಮಗೆ ಹೇಳುವೆ. ಆ ನುಡಿಮುತ್ತುಗಳು ನಿಮಗೆ ಉಪಯೋಗಕ್ಕೆ ಬರುತ್ತವೆಂದು ನಾನು ಭಾವಿಸಿದ್ದೇನೆ. ನಾನು ನಿಮಗೆ ತಿಳಿಸುವ ಒಂದು ನುಡಿಮುತ್ತಿಗೆ ಸಾವಿರ ಹೊನ್ನುಗಳಂತೆ ನೀವು 3 ಸಾವಿರ ಹೊನ್ನುಗಳನ್ನು ನನಗೆ ಕೊಟ್ಟರೆ ಒಳ್ಳೆಯದು' ಎಂದನು.

ರಾಜನು ಸಂತೋಷದಿಂದ ಪಂಡಿತರಿಂದ ಮೂರು ನುಡಿಮುತ್ತುಗಳನ್ನು ಪಡೆದು ಅವನಿಗೆ ಮೂರು ಸಾವಿರ ಹೊನ್ನುಗಳನ್ನು ನೀಡಿ ಗೌರವದಿಂದ ಅರಮನೆಯಿಂದ ಕಳುಹಿಸಿ ಕೊಟ್ಟನು. ಬಳಿಕ ತಾನು ಮಲಗುವ ಕೋಣೆಯಲ್ಲಿ ಮೂರು ನುಡಿಮುತ್ತುಗಳನ್ನು ಸೇವಕರಿಂದ ಬರೆಯಿಸಿ ಹಾಕಿಕೊಂಡನು.

ಅದೊಂದು ದಿನ ರಾಜನು ಮೊದಲ ನುಡಿಮುತ್ತನ್ನು ಓದಿದನು. 'ರಾಜನಾದವನು ಯಾವಾಗಲೂ ಎಚ್ಚರವಾಗಿರುವುದು ಅವಶ್ಯಕ' ಎಂದಿತ್ತು. ರಾಜ ಆ ನುಡಿಮುತ್ತನ್ನು ಓದಿದ ದಿನವೇ ರಾತ್ರಿ ಮಾರುವೇಷದಲ್ಲಿ ನಗರ ಸಂಚಾರಕ್ಕೆಂದು ಹೊರಟನು. ಆಗ ಮಧ್ಯರಾತ್ರಿ ಹನ್ನೆರಡು ಗಂಟೆಯಾಗಿತ್ತು. ಅಂತಹ ಕರಾಳ ರಾತ್ರಿಯಲ್ಲಿ ಮುದುಕಿಯೊಬ್ಬಳು ರಸ್ತೆಯ ಬದಿಯಲ್ಲಿ ನಿಂತುಕೊಂಡು ಅಳುತ್ತಿದ್ದಳು. ಮಾರುವೇಷದಲ್ಲಿದ್ದ ರಾಜನು ಅವಳ ಬಳಿಗೆ ಹೋಗಿ 'ಏಕಮ್ಮಾ ಅಳುತ್ತಿರುವೆ?' ಎಂದು ಕೇಳಿದ. ಅದಕ್ಕವಳು 'ಏನೆಂದು ಹೇಳಲಿ, ನಾನು ಈ ರಾಜ್ಯದ ಅಧಿದೇವತೆ. ಇನ್ನು ಏಳು ದಿನಗಳಲ್ಲಿ ಈ ಊರಿನ ದೊರೆ ಮಾರ್ತಾಂಡನು ಹಾವಿನ ಕಡಿತದಿಂದ ಸಾಯುತ್ತಾನೆ. ಮಾರ್ತಾಂಡನಂತಹ ದೊರೆ ಇನ್ನು ಮುಂದೆ ನಮಗೆ ಸಿಗುವುದಿಲ್ಲವಲ್ಲವೆಂದು ಅಳುತ್ತಿರುವೆ' ಎಂದಳು. ರಾಜನು ತಾನೇ ಮಾರ್ತಾಂಡ ದೊರೆಯೆಂದು ತೋರಿಸಿಕೊಳ್ಳದೆ ಅವಳಿಗೆ ಸಮಾಧಾನದ ಮಾತುಗಳನ್ನು ನುಡಿದು ಅಲ್ಲಿಂದ ಅರಮನೆಗೆ ಹಿಂತಿರುಗಿದನು.

ರಾಜನು ಎಂದಿನಂತೆ ಬೆಳಿಗ್ಗೆ ಎದ್ದು ಎರಡನೆಯ ನುಡಿಮುತ್ತನ್ನು ಓದಿದನು. ಅದರಲ್ಲಿ 'ರಾಜನಾದವನು ತನ್ನ ಶತ್ರುವನ್ನು ಗೌರವಿಸಬೇಕು, ಉಪಚರಿಸಬೇಕು' ಎಂದು ಬರೆದಿತ್ತು. ಅದನ್ನು ಓದಿದ ರಾಜನು ಅರಮನೆಯ ಬಾಗಿಲಿನಿಂದ ತನ್ನ ಮಲಗುವ ಕೋಣೆಯವರಗೆ ಸುವಾಸನೆ ನೀಡುವ ಹೂವುಗಳನ್ನು, ಸಿಹಿತಿಂಡಿಗಳನ್ನೂ ಮಾರ್ಗದ ಎರಡೂ ಪಕ್ಕಗಳಿಗೂ ಇರಿಸಿದನು. ಹಾಗೆಯೇ, ಮಲಗುವ ಕೋಣೆಯ ಬಾಗಿಲಿನ ಒಂದು ಪಕ್ಕಕ್ಕೆ ಹಾಲು ತುಂಬಿದ ಪಾತ್ರೆಯನ್ನು ಇರಿಸಿದನು. ಮುದುಕಿಯು ನುಡಿದಂತೆ ಹಾವು ತನ್ನ

